**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. 563/2019**

| | | |
|---|---|---|
| ಸಾಕ್ಷಿಯ ಹೆಸರುಃ | ಚಿಕ್ಕಸ್ವಾಮಿ | ಪ್ರಾಸಾಃ 12 |
| ತಂದೆ ಹೆಸರುಃ | ಮರಿಚನ್ನೇಗೌಡ | ಚಾಸಾಃ 16 |
| ವಯಸ್ಸುಃ | 41 ವರ್ಷ | ಪ್ರಮಾಣೀಕರಿಸಿದ<br>ದಿಃ 04/09/2023 |
| ಉದ್ಯೋಗಃ | ಆರಕ್ಷಕ ನಿರೀಕ್ಷಕರು,<br>ಬಸವೇಶ್ವರ ನಗರ ಪೊಲೀಸ್ ಠಾಣೆ,<br>ಬೆಂಗಳೂರು | |
| ವಾಸಸ್ಥಳಃ | ಬೆಂಗಳೂರು. | |

**ಮುಖ್ಯ ವಿಚಾರಣೆಃ** ಮಾನ್ಯ ಸಸಅ ರವರಿಂದಃ

ನಾನು 27/06/2016 ರಿಂದ 09/10/2018 ರವರೆಗೆ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ.ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 17/05/2016 ರಂದು ಚಾಸಾ–14 ರವರು ಸರ್ಕಾರಿ ಆಸ್ಪತ್ರೆ ಪಿರಿಯಾಪಟ್ಟಣದಲ್ಲಿ ಪ್ರಾಸಾ–1 ರವರ ಹೇಳಿಕೆಯನ್ನು ಪಡೆದುಕೊಂಡು ಸಂಜೆ 5.45 ಗಂಟೆಗೆ ಠಾಣೆಗೆ ಹಾಜರುಪಡಿಸಿದ್ದು, ಮೃತ ಚಾಸಾ–15 ರವರು ಸ್ವೀಕರಿಸಿಕೊಂಡು ಠಾಣಾ ಮೊ.ಸಂಃ 73/2016 ರಂತ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತಾರೆ. ಪ್ರಾಸಾ–1 ರವರ ಹೇಳಿಕೆಯನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದೆ. ನಿಪಿ.1 ರಲ್ಲಿರುವ ಮೃತ ಚಾಸಾ–15 ರವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು **ನಿಪಿ.1(ಸಿ)** ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು **ನಿಪಿ.9** ಎಂದು, ಮೃತ ಚಾಸಾ–15 ರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು **ನಿಪಿ.9(ಎ)** ಎಂದು ಗುರುತಿಸಲಾಯಿತು.

3. ದಿಃ 18/05/2016 ರಂದು ಮೃತ–ಚಾಸಾ–15 ರವರು ಫ್ರಾಸಾ–2 ರವರು ತೋರಿಸಿಕೊಟ್ಟ ಸ್ಥಳವನ್ನು ಪಂಚರಾದ ಚಾಸಾ–9 ಮತ್ತು 10 ರವರ ಸಮಕ್ಷಮ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ಚಾಸಾ–15 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು **ನಿಪಿ.2(ಡಿ)** ಎಂದು ಗುರುತಿಸಲಾಯಿತು. ಇದೇ ಪ್ರಕರಣದ ಮತ್ತೊಂದು ಕೃತ್ಯ ನಡೆದ ಸ್ಥಳವನ್ನು ಚಾಸಾ–5 ರವರು ತೋರಿಸಿಕೊಟ್ಟ ಮೇರೆಗೆ ಪಂಚರಾದ ಚಾಸಾ–9 ಮತ್ತು 10 ರವರ ಸಮಕ್ಷಮ ಮಹಜರ್ ಮಾಡಲಾಗಿರುತ್ತದೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ.8 ಎಂದು ಗುರುತಿಸಿದ್ದು, ಸಾಕ್ಷಿಯು ಮೃತ ಚಾಸಾ–15 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು **ನಿಪಿ.8(ಡಿ)** ಎಂದು ಗುರುತಿಸಲಾಯಿತು. ಅದೇ ದಿನ ಈ ಪ್ರಕರಣದ ಸಾಕ್ಷಿದಾರರಾದ ಚಾಸಾ–3, 4, 5 ಮತ್ತು 7 ರವರ ಹೇಳಿಕೆಯನ್ನು ಮೃತ ಚಾಸಾ–15 ರವರು ಪಡೆದಿರುತ್ತಾರೆ.

4. ದಿಃ 20/05/2016 ರಂದು ಈ ಪ್ರಕರಣದ ಸಾಕ್ಷಿದಾರರಾದ ಚಾಸಾ–2, 4, 8 ರವರ ಹೇಳಿಕೆಯನ್ನು ಚಾಸಾ–15 ರವರು ಪಡೆದುಕೊಂಡಿರುತ್ತಾರೆ.

5. ದಿಃ 22/05/2016 ರಂದು ಚಾಸಾ–1 ರವರ ಮರು ಹೇಳಿಕೆಯನ್ನು ಚಾಸಾ–15 ರವರು ಪಡೆದುಕೊಂಡಿರುತ್ತಾರೆ.

6. ದಿಃ 11/06/2016 ರಂದು ಚಾಸಾ–15 ರವರಿಂದ ಕಡತವನ್ನು ಪಡೆದುಕೊಂಡು ಅದೇ ದಿನ ಈ ಪ್ರಕರಣದ ಆರೋಪಿಗಳು ಮಾನ್ಯ ಘನ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಹಾಜರಾಗಿದ್ದು, ಅವರನ್ನು ದಸ್ತಗಿರಿ ಕ್ರಮ ಜರುಗಿಸಿ ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ಫ್ರಾಸಾ–2 ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು **ನಿಪಿ.10** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.10(ಎ)** ಎಂದು ಗುರುತಿಸಲಾಯಿತು. ನಂತರ ಅದೇ ದಿನ ಸಾಕ್ಷಿದಾರರ ಹೇಳಿಕೆಯ ಆಧಾರದ ಮೇರೆಗೆ ಮಂಜು, ಶೇಖರ್ ಮತ್ತು ಆನಂದರವರನ್ನು ಕೈಬಿಟ್ಟು, 1 ರಿಂದ 3 ನೇ ಆರೋಪಿತರ ವಿರುದ್ಧ ಆರೋಪ

ಸಾಬೀತಾದ ಮೇರೆಗೆ 341, 504, 323, 325 ಸಹ ವಾಚಕ ಕಲಂ 34 ಐ.ಪಿ.ಸಿ ರಂತೆ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈ ದಿನ ನ್ಯಾಯಾಲಯದಲ್ಲಿ 2 ನೇ ಆರೋಪಿತ ಹಾಜರಿದ್ದಾರೆ. 3 ನೇ ಆರೋಪಿತನ ಗುರುತಿನ ಬಗ್ಗೆ ಆರೋಪಿತರ ಪರ ವಕೀಲರು ತಕರಾರು ಇಲ್ಲವೆಂದು ನುಡಿಯುತ್ತಾರೆ.

**ಪಾಟೀ ಸವಾಲುಃ** ಆರೋಪಿತರ **ಪರ ಶ್ರೀ** ಆರ್.ಸಿ. **ವಕೀಲರಿಂದಃ**

7. ಚಾಸಾ–15 ರವರು ಯಾವುದೇ ಹೇಳಿಕೆಯನ್ನು ಸ್ವೀಕರಿಸಿಲ್ಲ, ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಕೃತ್ಯ ಸ್ಥಳಕ್ಕೆ ಬೇಟಿ ಮಾಡಿದೆ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಠಾಣೆಯಲ್ಲೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸಾರ್ವಜನಿಕ ಆಸ್ಪತ್ರೆ, ಪಿರಿಯಪಟ್ಟಣದಿಂದ ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ಎರಡು ಗಾಯದ ಪ್ರಮಾಣ ಪತ್ರಗಳನ್ನು ನಾನೇ ಸ್ವೀಕರಿಸಿರುತ್ತೇನೆ. ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ಮಹಜರ್ ನ್ನು ಠಾಣೆಯಲ್ಲಿ ಬರೆದಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯ ಎಸಗದಿದ್ದರೂ ಸಹ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ–15 ರವರು ಯಾವುದೇ ತನಿಖೆಯನ್ನು ಕೈಗೊಳ್ಳದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.